# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ-394/2013/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 18/11/2019.

## ವಿಚಾರಣಾ ವರದಿ

ಉಪಸ್ಥಿತರು: ಸೆಲ್ವಕುಮಾರ್.ಸಿ, ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ವಿಷಯ: ಶ್ರೀ ಕೃಷ್ಣರಾಜ್, ಸಹಾಯಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ದಿ ನಿಗಮ, ರಾಯಚೂರು ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: **1.ಕಂಪ್ಲೆಂಟ್/ಉಪಲೋಕ್/ಜಿಎಲ್.ಬಿ-240/2011/ಎಆರ್‌ಇ-6 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 11/02/2013.**

**2.**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/16/ಸುಗ್ರಾಯೋ/2013 ಬೆಂಗಳೂರು, ದಿನಾಂಕ:24/09/2013.

**3.**ನಾಮ ನಿರ್ದೇಶನ ಸಂಖ್ಯೆ:ಲೋಕ್/ಐಎನ್‌ಕ್ಯೂ/14-A/394/2013 ಬೆಂಗಳೂರು ದಿನಾಂಕ: 7/10/2013.

**4.**Note No.Uplok-1 & 2/DE/Transfers/2019, dated 07.02.2019.

* * * *

ಈ ದೂರನ್ನು, ದೂರುದಾರರಾದ ಶ್ರೀಮೆಹಬೂಬ್ ಬಿನ್ ನಬೀಸಾಬ್ ನಾಯಿಕೋಡಿ, ಹೆಗ್ಗಡದಿನ್ನಿ ರವರು ಶ್ರೀ ಕೃಷ್ಣರಾಜ್, ಸಹಾಯಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ದಿ ನಿಗಮ, ರಾಯಚೂರು(ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ ಎಂದು ಸಂಬೋಧಿಸಲ್ಪಡುವ) ರವರ ವಿರುದ್ಧ ಕರ್ತವ್ಯಲೋಪ ಮತ್ತು ದುರ್ನಡತೆಯಿಂದ ವರ್ತಿಸಿರುವುದಾಗಿ ಆಪಾದಿಸಿ, ದೂರು ದಾಖಲಿಸಿರುತ್ತಾರೆ.

2) ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ:24/09/2013ರಂದು ಮಾನ್ಯ ಉಪಲೋಕಾಯುಕ್ತ–1 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ–1 ರವರು ದಿನಾಂಕ: 07/10/2013ರಂದು ಅಪರ ನಿಬಂಧಕರು, ವಿಚಾರಣೆಗಳು–11ರವರಿಗೆ ವಿಚಾರಣೆ ಮಾಡಿ ವರದಿಯನ್ನು, ಉಲ್ಲೇಖ (3)ರಲ್ಲಿ ಕಾಣಿಸಿದಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು, ವಿಚಾರಣೆಗಳು–11ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು ವಿಚಾರಣೆಗಳು–16ಕ್ಕೆ ವರ್ಗಾವಣೆಗೊಂಡಿರುತ್ತದೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌರವರ ವಿರುದ್ಧ ದೋಷರೋಪಣೆ (Article of charges)ಅನ್ನು ಅಪರ ನಿಬಂಧಕರು ವಿಚಾರಣೆಗಳು–11ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ–1 ಮತ್ತು ಅನುಬಂಧ–2ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 21/10/2013 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ

4) ಆ.ಸ.ನೌ ರವರಾದ ನೀವು ರಾಯಚೂರು ಜಿಲ್ಲೆಯಲ್ಲಿ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸರ್ಕಾರವು ಮುಷ್ಟೂರು ನೀರಿನ ಟ್ಯಾಂಕ್ ಅಭಿವೃದ್ದಿಗಾಗಿ ರೂ.30.00 ಲಕ್ಷ ಮಂಜೂರು ಮಾಡಿದ್ದು, ಆದರೆ ಆಸನೌರವರು ಸದರಿ ನೀರಿನ ಟ್ಯಾಂಕನ್ನು ಅಭಿವೃದ್ದಿ ಪಡಿಸದೆ ಹಣ ದುರುಪಯೋಗ ಮಾಡಿಕೊಂಡಿರುವುದಾಗಿ, ಅಲ್ಲದೆ, ವೀರಗೋಟಿ ದೇವಸ್ಥಾನದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿಗಾಗಿ ಪ್ರವಾಸೋದ್ಯಮ ಇಲಾಖೆಯು ರೂ.14.5 ಲಕ್ಷಗಳನ್ನು ಮಂಜೂರು ಮಾಡಿದಾಗಿಯೂ, ಆಸನೌರವರು ಕಳಪೆ ಕಾಮಗಾರಿ ಮಾಡಿ ಹಣ ದುರುಪಯೋಗ ಮಾಡಿರುವ ಮುಖಾಂತರ ಸರ್ಕಾರಿ ನೌಕರನಿಗೆ

ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕೆ.ಸಿ.ಎಸ್. (ನಡತೆ) 1966ರ ನಿಯಮ 3(1)(i) ರಿಂದ (iii) ರನ್ವಯ ದುರ್ನಡತೆ ಎಸಗಿರುತ್ತಾರೆ ಎಂದು ಆಪಾದಿಸಲಾಗಿರುತ್ತದೆ.

**ಅನುಬಂಧ-2**

5) ದೂರುದಾರರಾದ ಶ್ರಿ ಮೆಹಬೂಬ್ ಬಿನ್ ನಬಿಸಾಬ್ ನಾಯಿಕೋಡಿ, ವಾಸ: ಹೆಗ್ಗಡದಿನ್ನಿ ರವರು ಈ ಲೋಕಾಯುಕ್ತ ಸಂಸ್ಥೆಗೆ ಆಸನೌರವರ ವಿರುದ್ಧ ಸಲ್ಲಿಸಲಾದ ದೂರಿನನ್ವಯ ಪ್ರಕರಣ ಕಂಪ್ಲೆಂಟ್/ಉಪಲೋಕ್/ಜಿಎಲ್.ಬಿ-240/2011 ಎಂದು ರಿಜಿಸ್ಟರ್ ಆಗಿರುವುದಾಗಿ ಹೇಳಿರುತ್ತಾರೆ. ದೂರಿನಲ್ಲಿ ಆಪಾದಿಸುವುದೇನೆಂದರೆ, ಸರ್ಕಾರವು ಮುಷ್ಟೂರು ನೀರಿನ ಟ್ಯಾಂಕ್ ಅಭಿವೃದ್ದಿಗಾಗಿ ರೂ.30.00 ಲಕ್ಷ ಮಂಜೂರು ಮಾಡಿದ್ದು, ಆದರೆ ಆಸನೌರವರು ಸದರಿ ನೀರಿನ ಟ್ಯಾಂಕನ್ನು ಅಭಿವೃದ್ದಿ ಪಡಿಸದೆ ಹಣ ದುರುಪಯೋಗ ಮಾಡಿಕೊಂಡಿರುವುದಾಗಿ ಹೇಳಲಾಗಿರುತ್ತದೆ. ಅಲ್ಲದೆ, ವೀರಗೋಟಿ ದೇವಸ್ಥಾನದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿಗಾಗಿ ಪ್ರವಾಸೋದ್ಯಮ ಇಲಾಖೆಯು ರೂ.14.5 ಲಕ್ಷಗಳನ್ನು ಮಂಜೂರು ಮಾಡಿದಾಗಿಯೂ ಈ ಆಸನೌರವರು ಕಳಪೆ ಕಾಮಗಾರಿ ಮಾಡಿ ಹಣ ದುರುಪಯೋಗ ಮಾಡಿರುವುದಾಗಿ ಆಪಾದಿಸಿ ದೂರು ಸಲ್ಲಿಸಿರುವುದಾಗಿ ಹೇಳಿರುತ್ತಾರೆ.

6) ಸದರಿ ದೂರಿನನ್ವಯ ಆಸನೌರವರಿಂದ ಆಕ್ಷೇಪಣೆ ಸಲ್ಲಿಸಲು ಸೂಚಿಸಿದಾಗಿಯೂ, ಆಸನೌರವರು ಸದರಿ ನೋಟಿಸು ಮತ್ತು ನೆನಪೋಲೆ ಜಾರಿಯಾದಾಗ್ಯೂ ಆಕ್ಷೇಪಣೆ ಅಥವಾ ತಕರಾರು ಸಲ್ಲಿಸಿರುವುದಿಲ್ಲವೆಂದು ಹೇಳಲಾಗಿರುತ್ತದೆ. ಆದಾಗ್ಯೂ ದಿ.6/3/2012ರಂದು ಆಸನೌರವರು ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶವನ್ನು ದಿ.20/3/2012 ರವರೆಗೂ ಕೋರಿಕೊಂಡಾಗಿಯೂ, ಸದರಿ ದಿನಾಂಕದಂದು ಅಥವಾ ಆ ಪೂರ್ವದಲ್ಲಿ ಆಕ್ಷೇಪಣೆ ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆಂದು ಹೇಳಲಾಗಿರುತ್ತದೆ. ಕಾರಣ, ಆಸನೌರವರಿಗೆ ದಿ.2/4/2012 ರಂದು ಮತ್ತು 13/4/2012 ರಂದು ನೆನಪೋಲೆಗಳನ್ನು ನೀಡಿದಾಗಿಯೂ, ಆಸನೌರವರು

ಆಕ್ಷೇಪಣೆ ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆಂದು ಹೇಳಲಾಗಿರುತ್ತದೆ. ಆನಂತರ ದಿ.11/5/2012 ರಂದು ನಿಮಗೆ/ಆಸನೌರವರಿಗೆ ಕಾರಣಕೇಳಿ ನೋಟೀಸ್ ನೀಡಿದ್ದು, ಸದರಿ ನೋಟೀಸು ತಲುಪಿದ ಒಂದು ವಾರದೊಳಗಾಗಿ ಏಕೆ ಕ್ರಮ ಜರುಗಿಸಬಾರದು ಎಂದು ನೋಟೀಸ್ ನೀಡಿರುವುದಾಗಿ, ಸದರಿ ಕಾರಣಕೇಳಿ ನೋಟೀಸು ನಿಮಗೆ/ಆಸನೌರವರಿಗೆ ದಿ.26/10/2012 ರಂದು ಜಾರಿಯಾಗಿರುವುದಾಗಿ ಹೇಳಲಾಗಿರುತ್ತದೆ. ಆದಾಗ್ಯೂ, ಆಸನೌರವರು ಯಾವುದೇ ಆಕ್ಷೇಪಣೆ ಅಥವಾ ಉತ್ತರ ನೀಡಿರುವುದಿಲ್ಲವೆಂದು ಹೇಳಲಾಗಿರುತ್ತದೆ. ಮುಂದುವರೆದು, ದಿ.20/12/2012 ರಂದು ಪರಿಶೀಲನಾ ಟಿಪ್ಪಣಿಯನ್ನು ನೀಡಿ ದುರ್ನಡತೆಯ ಬಗ್ಗೆ, ಏಕೆ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕ್ರಮ ಜರುಗಿಸಬಾರದು ಎಂದು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಬಾರದು ಎಂದು ನೀಡಿರುವುದಾಗಿ ಹೇಳಿರುತ್ತಾರೆ. ಈ ಪರಿಶೀಲನಾ ಟಿಪ್ಪಣಿಗೆ ಆಸನೌರವರು ಉತ್ತರಿಸಿದ್ದು, ಸದರಿ ಉತ್ತರವು ವಿಚಾರಣೆ ಕೈ ಬಿಡಲು ಸಾಧ್ಯವಿರದ ಕಾರಣ, ಆಸನೌರವರು ಸಂಪೂರ್ಣ ನಿಷ್ಠೆ ಮತ್ತು ದಕ್ಷತೆ ತೋರಿಸದೆ ಇರುವುದರಿಂದ ಮತ್ತು ಅದು ಸರ್ಕಾರಿ ನೌಕರನಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ ಕಲಂ 3(1)(i) ರಿಂದ (iii) ರನ್ವಯ ದುರ್ನಡತೆ ಎಸಗಿರುತ್ತಾರೆ ಎಂದು ಆಪಾದಿಸಲಾಗಿರುತ್ತದೆ.

7) ಸದರಿ ದೂರಿಗೆ ಸಂಬಂದಿಸಿದಂತೆ ನಿಮಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ನೀವು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ, ನಿಮ್ಮ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ಅಡಿಯಲ್ಲಿ ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿತ್ತು. ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ, ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು No.UPLOK-1&2/DE/ TRANSFERS/ 2019 DATED 07/02/2019 of the Hon'ble Registrar, Karnataka Lokayukta, Bengaluru, ರಂತೆ ವರದಿ ಸಲ್ಲಿಸಲು ಈ ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆ.

8) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ ರವರು ದಿನಾಂಕ 18/11/2013ರಂದು ಹಾಜರಾಗಿದ್ದು, ಅವರುಗಳ ಪ್ರಥಮ ಮೌಖಿಕ ಹೇಳಿಕೆ (First Oral Statement) ನಿಯಮ 11(9) ಕೆಸಿಎಸ್ (ಸಿಸಿಎ) ರೂಲ್ಸ್ 1957ರಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

9) ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

10) ಆ.ಸ.ನೌ ರವರು ಪ್ರತಿ ರಕ್ಷಣಾ ಹೇಳಿಕೆ ಸಲ್ಲಿಸಿ, ತಮ್ಮ ವಿರುದ್ಧದ ಆರೋಪಗಳನ್ನು ನಿರಾಕರಿಸಿರುತ್ತಾರೆ. ಮುಂದುವರೆದು, ಹೇಳುವುದೇನೆಂದರೆ, ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮುಷ್ಟೂರು ಹಾಗೂ ಇತರೆ 3 ಗ್ರಾಮಗಳ ಸಂಯುಕ್ತ ಕುಡಿಯುವ ನೀರು ಕಾಮಗಾರಿ ಯೋಜನೆಗೆ ಸಂಬಂದಿಸಿದಂತೆ ದೂರುದಾರರಾದ ಶ್ರೀ ಮೆಹಬೂಬ್ ನಾಯಿಕೋಡಿ ವಾಸ ಹೆಗ್ಗಡದಿನ್ನಿ ರವರು ದೂರು ನೀಡಿದ ನಂತರ ದಿ.12/10/2013 ರಂದು ತಮ್ಮ ಕಚೇರಿಗೆ ಬರೆದಿರುವ ಪತ್ರದಲ್ಲಿ ತನ್ನ ವಿರುದ್ದ ನೀಡಿರುವ ದೂರನ್ನು ಮತ್ತು ಕಾಮಗಾರಿಗಳು ಸಮರ್ಪಕವಾಗಿ ಮುಕ್ತಾಯವಾಗಿರುವುದರಿಂದ, ಹಾಗೂ ಸದರಿ ಕಾಮಗಾರಿಗಳಲ್ಲಿ ಯಾವುದೇ ಹಣದ ದುರುಪಯೋಗವಾಗದೆ ಇರುವುದರಿಂದ, ದೂರನ್ನು ಹಿಂಪಡೆಯುತ್ತಿರುವುದಾಗಿ ಹಾಗೂ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಿಕೊಂಡಿದ್ದರೆಂದು ಹೇಳಿರುತ್ತಾರೆ. ಅಲ್ಲದೆ, ರಾಯಚೂರು ವಿಭಾಗದ ಉಪ ನಿರ್ದೇಶಕರು, ದಿ.27/5/2013 ರಂದು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮುಷ್ಟೂರು ಹಾಗೂ ಇತರೆ 3 ಗ್ರಾಮಗಳ ಸಂಯುಕ್ತ ಕುಡಿಯುವ ನೀರು ಯೋಜನೆಯ ಕಾಮಗಾರಿಯ ಸ್ಥಳ ಪರಿಶೀಲನೆಯನ್ನು ನಡೆಸಿದ್ದಾಗಿ, ಕಾಮಗಾರಿಯನ್ನು ಸಮರ್ಪಕವಾಗಿ ಪೂರ್ಣಗೊಳಿಸಿರುವುದಾಗಿ ಕೇಂದ್ರ ಕಚೇರಿಗೆ ವರದಿ ಮಾಡಿರುವುದಾಗಿಯೂ ಹೇಳಿರುತ್ತಾರೆ. ಕಾರಣ, ತನ್ನಿಂದ ಯಾವುದೇ ರೀತಿಯಲ್ಲೂ ಸಾರ್ವಜನಿಕ ಹಣದ ದುರುಪಯೋಗವಾಗಿರುವುದಿಲ್ಲವೆಂದು ಹಾಗೂ ದೂರುದಾರರೇ ದೂರನ್ನು ಹಿಂಪಡೆದಿರುವುದರಿಂದ ಪ್ರಕರಣವನ್ನು ಈ ಹಂತದಲ್ಲಿಯೆ ಮುಕ್ತಾಯಗೊಳಿಸುವಂತೆ ವಿನಂತಿಸಿಕೊಂಡಿರುತ್ತಾರೆ.

11) ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ.ಮೆಹಬೂಬ್ ನಾಯಿಕೋಡಿ ರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ರಿಂದ ನಿ.ಪಿ-13ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಹಾಗೂ ಶ್ರೀ.ಸೋಮಲಿಂಗಪ್ಪ ಹಿಂಗಳಗಿ, ಹಿಂದಿನ ಅಪರ ನಿಬಂಧಕರು ವಿಚಾರಣೆಗಳು-6 ರವರನ್ನು ಪಿ.ಡಬ್ಲ್ಯು.2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-14 ರಿಂದ ನಿ.ಪಿ-21ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ವಿಚಾರಣಾ ಪ್ರಾಧಿಕಾರದ ಪರವಾಗಿ ಮೌಖಿಕ ಮತ್ತು ದಸ್ತಾವೇಜುಗಳನ್ನು ಗುರುತಿಸಿಕೊಂಡ ನಂತರ, ಆ.ಸ.ನೌರವರ ದ್ವಿತೀಯ ಮೌಖಿಕ ಹೇಳಿಕೆಗೆ ಈ ಪೂರ್ವದ ವಿಚಾರಣಾಧಿಕಾರಿಗಳಾದ ಎಆರ್.ಇ-11 ರವರು ದಿನಾಂಕ 30/11/2015 ರಂದು ವಿನಾಯಿತಿ(dispensed) ಆದೇಶ ಹೊರಡಿಸಿರುತ್ತಾರೆ.

12) ಆ.ಸ.ನೌರವರು ತಮ್ಮ ಪರವಾಗಿ ತಾನು ಡಿಬ್ಲ್ಯು-1 ರಂದು ಸಾಕ್ಷ್ಯ ನುಡಿದಿದ್ದು, ನಿಡಿ-1 ರಿಂದ 4 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

13) ಉಭಯ ಪಕ್ಷಗಾರರ ಪರವಾಗಿ ಸಲ್ಲಿಸಿರುವ ಲಿಖಿತ ವಾದವಿವಾದವನ್ನು ಪರಿಶೀಲಿಸಲಾಯಿತು.

14) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ-1:** ವಿಚಾರಣಾ ಪ್ರಾಧಿಕಾರವು ಆಸನೌರವರು ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಮುಷ್ಠೂರು ನೀರಿನ ಟ್ಯಾಂಕ್ ಅಭಿವೃದ್ಧಿ ಪಡಿಸದೆ, ಮಂಜೂರಾದ ರೂ.30.00 ಲಕ್ಷ ಹಣವನ್ನು ದುರುಪಯೋಗ ಮಾಡಿಕೊಂಡಿರುವುದನ್ನು ಹಾಗೂ ವೀರಗೋಟಿ ದೇವಸ್ಥಾನದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿಗಾಗಿ ಸರ್ಕಾರ ಮಂಜೂರು ಮಾಡಿದ ರೂ.14.5 ಲಕ್ಷದ ಕಾಮಗಾರಿ ಸರಿಯಾಗಿ ನಿರ್ವಹಿಸದೆ ಹಣ ದುರುಪಯೋಗ ಮಾಡಿಕೊಂಡಿರುವುದನ್ನು ರುಜುವಾತುಪಡಿಸಿದೆಯೇ?

**ಅಂಶ–2:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದಂತೆ ಆಕ್ಷೇಪಣೆ ಸಲ್ಲಿಸದೆ ದುರ್ನಡತೆ ಎಸಗಿರುವುದನ್ನು ರುಜುವಾತುಪಡಿಸಿದೆಯೇ?

**ಅಂಶ–3**: ಆದೇಶವೇನು?

15) ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** ನಕಾರಾತ್ಮಕವಾಗಿ.

**ಅಂಶ:–2)** ಸಕಾರಾತ್ಮಕವಾಗಿ

**ಅಂಶ–3)** ಅಂತಿಮ ಆದೇಶದಂತೆ.

## ಕಾರಣಗಳು

16) **ಅಂಶ–1 ಮತ್ತು 2:** ಈ ಪ್ರಕರಣದಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಶ್ರೀ.ಮೆಹಬೂಬ್ ತಂದೆ ನಬೀಸಾಬ್‌ರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–1 ರಿಂದ ನಿ.ಪಿ–13ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ–1 ದಾಖಲೆಯು ದೂರಿನ ಪ್ರತಿ ಇದ್ದು, ನಿ.ಪಿ–2 ಮತ್ತು ನಿ.ಪಿ–3, ಪ್ರಪತ್ರ–1 ಮತ್ತು 2 ಇರುತ್ತದೆ. ನಿ.ಪಿ–4 ರಿಂದ 11 ಪೋಟೋಗಳು, ನಿ.ಪಿ–12 ದಾಖಲೆಯು ಸದರಿ ಕಾಮಗಾರಿಗೆ ಸಂಬಂದಪಟ್ಟಂತೆ ಆಸನೌರವರ ಕಚೇರಿಯವರು ನೀಡಿದ ಕಾಮಗಾರಿ ವಿವರದ ಜೆರಾಕ್ಸ್ ಪ್ರತಿ, ನಿಪಿ–13, ನಿಪಿ–4 ರಿಂದ 12 ರವರೆಗಿನ ದಾಖಲಾತಿಗಳನ್ನು ಸಲ್ಲಿಸಿದ ಬಗ್ಗೆ ನೀಡಿದ ಪತ್ರ ಇರುತ್ತದೆ. ನಿಪಿ–14 ಪತ್ರವು ಈ ಲೋಕಾಯುಕ್ತ ಸಂಸ್ಥೆಯಿಂದ ದಿ.2/2/2012 ರಂದು ಆಸನೌರವರಿಗೆ ಪತ್ರ ಬರೆದು ದೂರಿಗೆ ಆಕ್ಷೇಪಣೆ ಸಲ್ಲಿಸಲು ಸೂಚಿಸಿದ ಪತ್ರದ ಕಚೇರಿ ಪ್ರತಿ ಇರುತ್ತದೆ. ನಿಪಿ–15, ದಿ.6/3/2012 ರಂದು ಆಸನೌರವರು ಈ ಲೋಕಾಯುಕ್ತ ಸಂಸ್ಥೆಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ

ಕೇಳಿ ಬರೆದ ಪತ್ರವಿರುತ್ತದೆ. ನಿಪಿ–16 ಪತ್ರವು ದಿ.2/4/2012 ರಂದು ಆಸನೌರವರಿಗೆ ಆಕ್ಷೇಪಣೆಯನ್ನು ದಿ.12/4/2012 ರೊಳಗಾಗಿ ಸಲ್ಲಿಸುವಂತೆ ಸೂಚಿಸಿ ಬರೆದ ಪತ್ರದ ನೆನಪೋಲೆಯ ಕಚೇರಿ ಪ್ರತಿ ಇರುತ್ತದೆ. ಸದರಿ ಪತ್ರವು, ಈ ಆಸನೌರವರಿಗೆ ದಿ.18/4/2012 ರಂದು ಜಾರಿ ಮಾಡಿರುವುದು ಕಂಡು ಬರುತ್ತದೆ. ಸದರಿ ಸಹಿಯನ್ನು ನಿಪಿ–16(ಬಿ) ಎಂದು ಮಂಡನಾಧಿಕಾರಿಗಳು ಗುರುತಿಸಿಕೊಂಡಿರುತ್ತಾರೆ. ಸದರಿ ನೆನಪೋಲೆಯು ಆಸನೌರವರಿಗೆ ಜಾರಿಯಾಗಿದ್ದರೂ ಸಹ, ಆಕ್ಷೇಪಣೆ ಸಲ್ಲಿಸಲಿಲ್ಲವಾದ್ದರಿಂದ, ದಿ.13/4/2012 ರಂದು ಮತ್ತೊಂದು ನೆನಪೋಲೆಯನ್ನು ಆಸನೌರವರಿಗೆ ಕಳುಹಿಸಿದ್ದು, ಅದು, ನಿಪಿ–17 ಇರುತ್ತದೆ. ಸದರಿ ನೆನಪೋಲೆಗೂ ಸಹ ಆಸನೌರವರು ಸ್ಪಂದಿಸಿರುವುದಿಲ್ಲವಾದ್ದರಿಂದ, ದಿ.11/5/2012 ರಂದು ಕಾರಣ ಕೇಳುವ ನೋಟೀಸನ್ನು ಆಸನೌರವರಿಗೆ ಕಳುಹಿಸಿದ್ದು, ಅದು ರಾಯಚೂರಿನ ಕರ್ನಾಟಕ ಲೋಕಾಯುಕ್ತ ಪೊಲೀಸರು ಆಸನೌರವರಿಗೆ ಖುದ್ದು ಜಾರಿ ಮಾಡಿದ್ದು, ಅದನ್ನು ನಿಪಿ–18 ಎಂದೂ, ಸಾಕ್ಷಿ ಸಹಿಯನ್ನು ನಿಪಿ–18(ಎ) ಎಂದೂ ಹಾಗೂ ಆಸನೌರವರ ಸಹಿಯನ್ನು ನಿಪಿ–18(ಬಿ) ಎಂದೂ ಗುರುತಿಸಿಕೊಂಡಿರುತ್ತಾರೆ. ಸದರಿ ನೋಟೀಸು ಜಾರಿ ಮಾಡಿದ ಬಗ್ಗೆ ರಾಯಚೂರು ಲೋಕಾಯುಕ್ತ ಪೊಲೀಸರು ನೀಡಿದ ವರದಿಯನ್ನು ನಿಪಿ–19 ಎಂದು ಗುರುತಿಸಿಕೊಂಡಿರುತ್ತಾರೆ. ಸದರಿ ಕಾರಣ ಕೇಳುವ ನೋಟೀಸಿಗೂ ಸಹ ಆಸನೌರವರು ಸ್ಪಂದಿಸಲಿಲ್ಲವಾದ್ದರಿಂದ ಗೌರವಾನ್ವಿತ ಉಪಲೋಕಾಯುಕ್ತ–1 ರವರ ಆದೇಶದಂತೆ ದಿ.20/12/2012 ರಂದು ಪರಿವೀಕ್ಷಣಾ ಟಿಪ್ಪಣಿಯನ್ನು ರಚಿಸಿ ಅದನ್ನು ಆಸನೌರವರಿಗೆ ಜಾರಿ ಮಾಡಲು ಕರ್ನಾಟಕ ಲೋಕಾಯುಕ್ತ ರಾಯಚೂರುರವರಿಗೆ ಕಳುಹಿಸಿದ್ದಾಗಿ ಸದರಿ ಪರಿವೀಕ್ಷಣಾ ಟಿಪ್ಪಣಿಯನ್ನು ನಿಪಿ–20 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ–20(ಎ) ಎಂದು ಮತ್ತು ಆಸನೌರವರ ಸಹಿಯನ್ನು ನಿಪಿ–20(ಬಿ) ಎಂದು ಗುರುತಿಸಿಕೊಂಡಿರುತ್ತಾರೆ. ರಾಯಚೂರು ಲೋಕಾಯುಕ್ತ ಪೊಲೀಸರು ಪರಿವೀಕ್ಷಣಾ ಟಿಪ್ಪಣಿ ಜಾರಿ ಮಾಡಿದ ಬಗ್ಗೆ ನೀಡಿದ ವರದಿಯನ್ನು ನಿಪಿ–21 ಎಂದು ಗುರುತಿಸಿಕೊಂಡಿರುತ್ತಾರೆ. ನಿಪಿ–20 ಪರಿವೀಕ್ಷಣಾ ಟಿಪ್ಪಣಿಯಲ್ಲಿ ಕಾಣಿಸಿದಂತೆ ಅದು ತಲುಪಿದ 15 ದಿನಗಳೊಳಗಾಗಿ ಸಮಜಾಯಿಷಿ ನೀಡುವಂತೆ ಸೂಚಿಸಿದ್ದಾಗಿಯೂ ಮತ್ತು ಅದು ದಿ.28/12/2012 ರಂದು ಆಸನೌರವರಿಗೆ ಜಾರಿಯಾದಾಗ್ಯೂ, ಜಾರಿ ದಿನಾಂಕದಿಂದ 15 ದಿನಗಳೊಳಗಾಗಿ ಆಸನೌರವರು ತಮ್ಮ ವಿವರಣೆಯನ್ನು ಸಲ್ಲಿಸಿರುವುದಿಲ್ಲವೆಂದು ಹೇಳಿರುತ್ತಾರೆ.

17) ಆ.ಸ.ನೌರವರ ವಿರುದ್ಧ ರಚಿಸಲಾದ ಆರೋಪವನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರನ್ನು ಪಿ.ಡಬ್ಲ್ಯು-1 ಎಂದು ಸಾಕ್ಷಿ ನುಡಿಸಿಕೊಂಡಿರುತ್ತಾರೆ. ಪಿ.ಡಬ್ಲ್ಯು-1ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು ನಿಪಿ-1 ದೂರು ಸಲ್ಲಿಸಿದ ಬಗ್ಗೆ ಹಾಗೂ ಪೂರಕವಾಗಿ ನಿಪಿ-2 ಮತ್ತು 3 ಪ್ರಪತ್ರ 1 ಮತ್ತು 2 ನೀಡಿರುವ ಬಗ್ಗೆ ಹಾಗೂ ಪ್ರವಾಸೋದ್ಯಮ ಇಲಾಖೆ ಅನುದಾನದಲ್ಲಿ ನಿರ್ಮಿಸಲಾದ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ಸಂಬಂದಿಸಿದಂತೆ ಪೋಟೋಗಳನ್ನು ನಿಪಿ-4 ರಿಂದ 11 ರವರೆಗೆ ಗುರುತಿಸಿಕೊಂಡಿರುತ್ತಾರೆ. ನಿಪಿ-12 ಕಾಮಗಾರಿಗೆ ಸಂಬಂದಪಟ್ಟ ವಿವರದ ಜೆರಾಕ್ಸ್ ಪ್ರತಿ ಇರುತ್ತದೆ.

18) ಈ ಪ್ರಕರಣದಲ್ಲಿ ಮೊದಲನೆ ಆರೋಪದಲ್ಲಿ ವಿವರಿಸಿದಂತೆ ಸರ್ಕಾರವು ಮುಷ್ಟೂರು ನೀರಿನ ಟ್ಯಾಂಕ್ ಅಭಿವೃದ್ದಿಗಾಗಿ ರೂ.30 ಲಕ್ಷ ಮಂಜೂರು ಮಾಡಿದ್ದು, ಅದನ್ನು ಅಭಿವೃದ್ಧಿ ಪಡಿಸದೆ ಈ ಆಸನೌರವರು ಹಣ ದುರುಪಯೋಗ ಮಾಡಿಕೊಂಡಿರುವುದಾಗಿ ಆಪಾದಿಸಲಾಗಿರುತ್ತದೆ. ಮುಂದುವರೆದ ಆರೋಪವೇನೆಂದರೆ, ಈ ಆಸನೌರವರು ವೀರಗೋಟಿ ದೇವಸ್ಥಾನದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿಗಾಗಿ ಪ್ರವಾಸೋದ್ಯಮ ಇಲಾಖೆಯು ರೂ.14.5 ಲಕ್ಷಗಳನ್ನು ಮಂಜೂರು ಮಾಡಿದಾಗಿಯೂ ಸಹ, ಸರಿಯಾಗಿ ಕಾಮಗಾರಿ ನಿರ್ವಹಿಸದೆ, ಕಳಪೆ ಕಾಮಗಾರಿ ಮಾಡಿ ರೂ.14.5 ಲಕ್ಷಗಳನ್ನು ದುರುಪಯೋಗ ಮಾಡಿಕೊಂಡಿರುವುದಾಗಿ ಆಪಾದಿಸಲಾಗಿರುತ್ತದೆ. ಈ ಬಗ್ಗೆ ದಾಖಲಾದ ದೂರು ಸಂಖ್ಯೆ **ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-240/2011 ಮತ್ತು ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-239/2011,** ಎರಡೂ ಪ್ರಕರಣಗಳು ಒಟ್ಟಿಗೆ ವಿಚಾರಣೆ ಮಾಡುವಂತೆ ಮಾನ್ಯ ಉಪಲೋಕಾಯುಕ್ತ-1 ರವರ ಆದೇಶದಂತೆ ಎರಡೂ ಪ್ರಕರಣಗಳು ಜಂಟಿಯಾಗಿ ವಿಚಾರಣೆ ಮಾಡಲಾಗಿರುತ್ತದೆ. ಸದರಿ ದೂರು ಪ್ರಕರಣದಲ್ಲಿ ಈ ಆರೋಪಕ್ಕೆ ಸಂಬಂದಿಸಿದಂತೆ ಮಾನ್ಯ ಉಪಲೋಕಾಯುಕ್ತರವರು ತನಖೆಯನ್ನು ತಾಂತ್ರಿಕ ವಿಭಾಗಕ್ಕೆ ಶಿಫಾರಸ್ಸು ಮಾಡಿದ್ದು ಸದರಿ ಶಿಫಾರಸ್ಸಿನ ಅನ್ವಯ ಈ ಸಂಸ್ಥೆಯ ತಾಂತ್ರಿಕ ವಿಭಾಗದವರು ತನಿಖೆ ಕೈಗೊಂಡು ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಈ ಎರಡೂ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ತಾಂತ್ರಿಕ ತಂಡದ ತನಿಖಾಧಿಕಾರಿಯವರು ನೀಡಿದ ವರದಿಯ ಪ್ರಕಾರ, ಅಪರ ನಿಬಂಧಕರು ವಿಚಾರಣೆಗಳು-5 ರವರು ಮೇಲ್ಕಂಡ ಎರಡೂ ದೂರು ಪ್ರಕರಣಗಳಲ್ಲಿನ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ಮತ್ತು ವಿಚಾರಣೆ ಮುಕ್ತಾಯಗೊಳಿಸಬಹುದೆಂದು ಮಾನ್ಯ ಉಪಲೋಕಾಯುಕ್ತರವರಿಗೆ ಮಂಡಿಸಿದ ಮೇರೆಗೆ

ಮಾನ್ಯ ಉಪಲೋಕಾಯುಕ್ತರವರು ಸದರಿ ಕಂಡಿಕೆಯನ್ನು ಒಪ್ಪಿ ದಿನಾಂಕ :20/8/2016 ರಂದು ಮುಕ್ತಾಯಗೊಳಿಸಿರುತ್ತಾರೆ. ಕಾರಣ, ಈ ಮೇಲ್ಕಂಡ ಕಾಮಗಾರಿಗೆ ಸಂಬಂದಪಟ್ಟ ಆರೋಪದ ಮೇಲಿನ ಸವಿಸ್ತಾರವಾದ ಚರ್ಚೆಯು ಪ್ರಸ್ತುತ ವಿಚಾರಣೆಯಲ್ಲಿರುವ ಈ ಪ್ರಕರಣದಲ್ಲಿ ಅನವಶ್ಯಕವೆಂದು ಕಂಡು ಬಂದಿರುತ್ತದೆ. ಅಲ್ಲದೆ, ಆಸನೌರವರ ಮೇಲೆ ಹೊರಿಸಲಾದ ಹಣ ದುರುಪಯೋಗದ ಬಗ್ಗೆ ಪ್ರಸ್ತುತ ಈ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರವು ಅವಶ್ಯಕ ಸಾಕ್ಷ್ಯಾಧಾರಗಳನ್ನು ನೀಡಿರುವುದಿಲ್ಲ. ಈಗಾಗಲೆ ಮೇಲ್ಕಂಡ ಹಣ ದುರುಪಯೋಗದ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ದೂರು ಪ್ರಕರಣದಲ್ಲಿ ನಿರ್ಣಯಿಸಿರುವುದರಿಂದ, ಪ್ರಸ್ತುತ ವಿಚಾರಣೆಯಲ್ಲಿರುವ ಈ ಪ್ರಕರಣದಲ್ಲಿ ಆ ಆರೋಪದ ಬಗ್ಗೆ ತೀರ್ಮಾನಿಸುವುದು ಸೂಕ್ತವಲ್ಲವೆಂದು ನಿರ್ಣಯಿಸಿ ಮತ್ತು ಈಗಾಗಲೆ ಹೇಳಲಾದಂತೆ ಶಿಸ್ತು ಪ್ರಾಧಿಕಾರವು, ಈ ಮೇಲ್ಕಂಡ ಅಂಶ-1 ರಲ್ಲಿನ ಆರೋಪಕ್ಕೆ ಸಂಬಂದಿಸಿದಂತೆ ಸೂಕ್ತ ಸಾಕ್ಷ್ಯಾಧಾರ ನೀಡದೆ ಇರುವುದರಿಂದ, ಅಂಶ-1 ರ ಆರೋಪವನ್ನು ಶಿಸ್ತು ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತದೆಂದು ತೀರ್ಮಾನಿಸಿ **ಅಂಶ-1 ಕ್ಕೆ ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

19) ಈ ಪ್ರಕರಣದಲ್ಲಿ ಆಸನೌರವರ ವಿರುದ್ಧ ಮಾಡಲಾದ **ಎರಡನೆ** ದೋಷಾರೋಪಣೆ ಏನೆಂದರೆ ಈ ಆಸನೌರವರು ಈ ದೂರಿಗೆ ಸಂಬಂದಪಟ್ಟಂತೆ ದಾಖಲಾಗಿದ್ದ **ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-240/2011/ಎಆರ್.ಇ-6** ಪ್ರಕರಣದಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ನೋಟೀಸು, ನೆನಪೋಲೆಗಳನ್ನು ನೀಡಿದ್ದಾಗಿಯೂ ಆಕ್ಷೇಪಣೆ ಸಲ್ಲಿಸುವಲ್ಲಿ ವಿಫಲರಾಗಿರುತ್ತಾರೆಂದು ಮತ್ತು ಸಲ್ಲಿಸದೆ ಇರಲು ಸಕಾರಣವನ್ನು ನೀಡದೆ ದುರ್ನಡತೆ ಎಸಗಿರುತ್ತಾರೆಂಬುದಾಗಿರುತ್ತದೆ. ಮುಂದುವರೆದು, ಈ ಆಸನೌರವರು ಸ್ವತ: ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೇಳಿ ನಿಪಿ-15 ರಂತೆ ದಿ.6/3/2012 ರಂದು ಪತ್ರ ಬರೆದು ವಿನಂತಿಸಿಕೊಂಡಾಗಿಯೂ, ನಿಗದಿತ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸದೆ ದುರ್ನಡತೆ ತೋರಿರುತ್ತಾರೆಂಬುದಾಗಿರುತ್ತದೆ. ತದನಂತರ, ಈ ಲೋಕಾಯುಕ್ತ ಸಂಸ್ಥೆಯ ವಿಚಾರಣಾಧಿಕಾರಿಗಳು ದಿ.2/4/2012 ರಂದು ನೆನಪೋಲೆಯನ್ನು ನಿಪಿ-16 ರಂತೆ ನೀಡಿದ್ದು ಅದು ಆಸನೌರವರಿಗೆ ಖುದ್ದು ದಿ.18/4/2012 ರಂದು ಜಾರಿ ಮಾಡಿದ್ದು, ಅದರಲ್ಲಿ ಆಸನೌರವರು ನಿಪಿ-16(ಬಿ) ರಂತೆ ಸಹಿಮಾಡಿ ಪಡೆದುಕೊಂಡಾಗಿಯೂ, ಆಕ್ಷೇಪಣೆ ಸಲ್ಲಿಸದೆ ದುರ್ನಡತೆ ಎಸಗಿರುವುದು ಕಂಡು ಬರುತ್ತದೆ. ಸದರಿ ನೆನಪೋಲೆ

ಜಾರಿಯಾದಾಗ್ಯೂ, ಈ ಆಸನೌರವರು ಆಕ್ಷೇಪಣೆ ಸಲ್ಲಿಸದೆ ಇರುವ ಕಾರಣ ಪುನ: ದಿ.13/4/2012 ರಂದು ಮತ್ತೊಂದು ನೆನಪೋಲೆಯನ್ನು ಆಸನೌರವರಿಗೆ ನಿಪಿ–17 ರಂತೆ ಕಳುಹಿಸಿದ್ದು, ಸದರಿ ನೆನಪೋಲೆಗೆ ಆಸನೌರವರು ಯಾವುದೇ ರೀತಿಯಲ್ಲಿ ಸ್ಪಂದಿಸಿರುವುದಿಲ್ಲವೆಂಬುದು ಕಂಡು ಬರುತ್ತದೆ. ತದನಂತರ, ದಿ.11/5/2012 ರಂದು ನಿಪಿ–18 ರಂತೆ ಈ ಆಸನೌರವರಿಗೆ ಕಾರಣಕೇಳುವ ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸನ್ನು ಕರ್ನಾಟಕ ಲೋಕಾಯುಕ್ತ ಪೊಲೀಸ್, ರಾಯಚೂರು ರವರ ಮುಖಾಂತರ ಕಳುಹಿಸಿದಾಗ ಸದರಿ ನೋಟೀಸನ್ನು ದಿ.26/10/2012 ರಂದು ಜಾರಿ ಮಾಡಲಾಗಿರುತ್ತದೆ. ಆಸನೌರವರ ಸಹಿಯನ್ನು ನಿಪಿ–18(ಬಿ) ಎಂದು ಗುರುತಿಸಿಕೊಂಡಿರುತ್ತಾರೆ. ಸದರಿ ನೋಟೀಸು ಜಾರಿ ಮಾಡಿದ ವರದಿ ನಿಪಿ–19 ಇರುತ್ತದೆ. ಸದರಿ ಕಾರಣ ಕೇಳುವ ನೋಟೀಸಿಗೂ ಸಹ ಆಸನೌರವರು ಸ್ಪಂದಿಸಲಿಲ್ಲವಾದ್ದರಿಂದ, ಗೌರವಾನ್ವಿತ ಉಪಲೋಕಾಯುಕ್ತ–1 ರವರ ಆದೇಶದಂತೆ ಆಸನೌರವರಿಗೆ ದಿ.20/12/2012 ರಂದು ಪರಿವೀಕ್ಷಣಾ ಟಿಪ್ಪಣಿಯನ್ನು ರಚಿಸಿ ಜಾರಿ ಮಾಡಲು ಕರ್ನಾಟಕ ಲೋಕಾಯುಕ್ತ ಪೊಲೀಸ್, ರಾಯಚೂರು ರವರಿಗೆ ಕಳುಹಿಸಿದ್ದು, ಅದು ನಿಪಿ–20 ಎಂದು ಆಸನೌರವರಿಗೆ ಜಾರಿಯಾದ ದಿನಾಂಕವು 28/12/2012 ಎಂದು ಬರೆಯಲಾಗಿರುತ್ತದೆ. ಸದರಿ ಪರಿವೀಕ್ಷಣಾ ಟಿಪ್ಪಣಿಯಲ್ಲಿ ಕಾಣಿಸಿದಂತೆ ಜಾರಿಯಾದ 15 ದಿನಗೊಳಗಾಗಿಯೂ ಸಹ ವಿವರಣೆಯನ್ನು ಸಲ್ಲಿಸಿರುವುದಿಲ್ಲವೆಂಬುದು ಪಿಡಬ್ಲ್ಯು–2 ರವರ ಸಾಕ್ಷ್ಯದಿಂದ ಕಂಡು ಬರುತ್ತದೆ.

20) ಶಿಸ್ತುಪ್ರಾಧಿಕಾರವು ಆಪಾದಿತ ಸರ್ಕಾರಿ ನೌಕರರ ವಿರುದ್ದದ ಆರೋಪಕ್ಕೆ ಸಂಬಂದಿಸಿದಂತೆ ಈ ಆಸನೌರವರು ಮುಷ್ಟೂರು ಕೆರೆ ಅಭಿವೃದ್ಧಿ ಕಾಮಗಾರಿಯಲ್ಲಿ ಹಣ ದುರುಪಯೋಗ ಮಾಡಿರುವುದನ್ನು ರುಜುವಾತುಪಡಿಸಲು ಅವಶ್ಯಕ ಸಾಕ್ಷ್ಯಾಧಾರಗಳನ್ನು ನೀಡಿರುವುದಿಲ್ಲ, ಆದರೆ ಈ ಆಸನೌರವರು ಈ ಲೋಕಾಯುಕ್ತ ಸಂಸ್ಥೆಗೆ ನಿಗದಿತ ಸಮಯದಲ್ಲಿ ಆಕ್ಷೇಪಣೆ ಸಲ್ಲಿಸದೆ ನೋಟೀಸು, ನೆನಪೋಲೆ, ಕಾರಣಕೇಳುವ ನೊಟೀಸ್ ಹಾಗೂ ಪರಿವೀಕ್ಷಣಾ ಟಿಪ್ಪಣಿಯನ್ನು ನೀಡಿದಾಗಿಯೂ ಸೂಕ್ತ ರೀತಿಯಲ್ಲಿ ಸ್ಪಂದಿಸದೆ ದುರ್ನಡತೆ ಎಸಗಿ ಕರ್ತವ್ಯಲೋಪವುಂಟುಮಾಡಿದ್ದಾರೆಂಬುದು ಕಂಡು ಬರುತ್ತದೆ. ಈ ಬಗ್ಗೆ ಆಸನೌರವರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಡಿ.ಡಬ್ಲ್ಯು–1 ಎಂದು ಸಾಕ್ಷ್ಯ ನುಡಿದಿದ್ದು, ತನ್ನ ಸಾಕ್ಷದ ಮುಖ್ಯ ವಿಚಾರಣೆಯಲ್ಲಿ ಈ ರೀತಿ ನುಡಿದಿರುತ್ತಾರೆ.

**"ಮಾರ್ಚ್ 2012 ರಲ್ಲಿ ಅಪರ ನಿಬಂಧಕರು ವಿಚಾರಣೆಗಳು–10 ರವರಿಂದ ಆಕ್ಷೇಪಣೆಯನ್ನು ಕೇಳಿ ಪತ್ರವನ್ನು ಬರೆಯಲಾಗಿತ್ತು. ನಾನು ದಿ.20/3/2012 ರವರೆಗೆ ಕಾಲಾವಕಾಶವನ್ನು ಕೋರಿದೆ. ನಂತರ ಮಾರ್ಚ್ 2012 ರ ನಂತರ ನಾನು ಆಶ್ವಾಸನೆ ಕೊಟ್ಟಂತೆ ಉತ್ತರವನ್ನು ಕೊಡಲಾಗಲಿಲ್ಲ. ಅದಕ್ಕಾಗಿ ನೆನಪೋಲೆ ಕೂಡ ಅಪರ ನಿಬಂಧಕರು ವಿಚಾರಣೆಗಳು–6 ರವರಿಂದ ಬಂದಿದ್ದು, ಅದು ನನಗೆ ಮುಟ್ಟಿದ್ದು, ಅಪರ ನಿಬಂಧಕರು ವಿಚಾರಣೆಗಳು–6 ರವರು ನನ್ನ ಹೆಸರಿನಿಂದ ನೋಟೀಸನ್ನು ಕಳುಹಿಸಿದ್ದರು ಹುದ್ದೆಯಿಂದಲ್ಲ. "**

**"ಅಮಾನತ್ತುಗೊಂಡ ನಂತರವೂ ಕೂಡ ನನಗೆ ಅಪರ ನಿಬಂಧಕರು ವಿಚಾರಣೆಗಳು–6 ರವರಿಂದ ನೋಟೀಸ್ ಜಾರಿಯಾಗಿದೆ, ಅದಕ್ಕೂ ಕೂಡ ನಾನೇನೂ ಉತ್ತರ ಕೊಡಲಿಲ್ಲ. ನಿಪಿ–15 ನನಗೆ ವೈಯುಕ್ತಿಕವಾಗಿ ಜಾರಿಯಾಗಿ ಅದರಲ್ಲಿ ನನ್ನ ಸಹಿ ಇದೆ. ಅದು ದಿ.26/10/2012 ರಂದು ಜಾರಿಯಾಗಿದೆ. "**

21) ಈ ರೀತಿ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದನ್ನು ಪರಿಶೀಲಿಸಿದಾಗ ಈ ಆಸನೌರವರಿಗೆ ನೋಟಿಸು ಮತ್ತು ನೆನಪೋಲೆಗಳು ತಲುಪಿರುವುದನ್ನು ಒಪ್ಪಿಕೊಂಡಿರುತ್ತಾರೆ. ಅಲ್ಲದೆ, ತನ್ನ ಪಾಟೀಸವಾಲಿನಲ್ಲಿ ತಾನು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ, ಅಪರ ನಿಬಂಧಕರು ವಿಚಾರಣೆಗಳು–6 ರವರು ನೋಟೀಸು ಕೊಟ್ಟ ವಿಷಯ ಮತ್ತು ದೋಷಾರೋಪಣೆಯಲ್ಲಿ ಮಾಡಿದ ಆಪಾದನೆಗಳನ್ನು ಶಬ್ದಶ ಅಲ್ಲಗಳೆದಿಲ್ಲವೆಂಬುದನ್ನು ಒಪ್ಪಿಕೊಂಡಿರುತ್ತಾರೆ. ಅಲ್ಲದೆ, ತನಗಿರುವ ಅನಾನುಕೂಲತೆಗಳ ಬಗ್ಗೆ ಅಪರ ನಿಬಂಧಕರು ವಿಚಾರಣೆಗಳು–6 ರವರಿಗೆ ತಾನು ಲಿಖಿತ ಮೂಲಕ ತಿಳಿಸಲಿಲ್ಲವೆಂಬುದನ್ನು ಒಪ್ಪಿಕೊಂಡಿರುತ್ತಾರೆ. ಅಲ್ಲದೆ, ತಾನು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿಯೂ ಸಹ ಯಾವ ಕಾರಣಕ್ಕಾಗಿ ನೋಟೀಸುಗಳಿಗೆ ಉತ್ತರ ಕೊಡಲು ಸಾಧ್ಯವಾಗಲಿಲ್ಲವೆಂಬುದಕ್ಕೆ ಬರೆದಿಲ್ಲವೆಂಬುದನ್ನು ಒಪ್ಪಿಕೊಂಡಿರುತ್ತಾರೆ. ಈ ಎಲ್ಲಾ ಅಂಶವನ್ನು ಪರಿಶೀಲಿಸಲಾಗಿ ಈ ಆಸನೌರವರು ಜವಾಬ್ದಾರಿಯುತ ಸಾರ್ವಜನಿಕ ನೌಕರನಿದ್ದು, ಲೋಕಾಯುಕ್ತ ಸಂಸ್ಥೆಯಿಂದ ನೀಡಲಾದ ನೋಟೀಸು, ನೆನಪೋಲೆ, ಕಾರಣಕೇಳುವ ನೋಟೀಸು ಮತ್ತು ಪರಿವೀಕ್ಷಣಾ ಟಿಪ್ಪಣಿಗಳಿಗೆ ಪ್ರತಿಕ್ರಿಯಿಸದೆ ದುರ್ನಡತೆ ತೋರಿ ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು ಅವಶ್ಯಕ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳ ಮುಖಾಂತರ ರುಜುವಾತು ಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆ ಎಂದು ತೀರ್ಮಾನಿಸಲಾಗಿದೆ.

22) ಶಿಸ್ತು ಪ್ರಾಧಿಕಾರವು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವು, ಈ ಆ.ಸ.ನೌ ರವರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲವೆಂಬುದು ಕಂಡು ಬಂದಿದ್ದು, ಇವರ ಕೃತ್ಯವು ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರಡಿ

ನಿಯಮ 3(1)ರಡಿಯಲ್ಲಿ ದುರ್ವರ್ತನೆ ಎಸಗಿರುತ್ತಾರೆಂಬುವ ಸಂಭವನೀಯತೆ (Probabilities) ಕಂಡು ಬಂದಿರುತ್ತದೆ.

23) ಕಾರಣ, ಆ.ಸ.ನೌರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ ಕಲಂ 3(1)(i) ರಿಂದ (iii) ರನ್ವಯ ಆಪಾದಿಸಲಾದ ಆರೋಪಗಳನ್ನು ಶಿಸ್ತು ಪ್ರಾಧಿಕಾರವು ಅವಶ್ಯಕ ಸಾಕ್ಷ್ಯಾಧಾರಗಳ ಮೂಲಕ ರುಜುವಾತು ಪಡಿಸಿ, ದುರ್ನಡತೆ, ಕರ್ತವ್ಯಲೋಪಗಳನ್ನು ರುಜುವಾತು ಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ–1 ಕ್ಕೆ ನಕಾರಾತ್ಮಕವಾಗಿ ಮತ್ತು ಅಂಶ–2 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–3: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

*ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ* ಶ್ರೀ ಕೃಷ್ಣರಾಜ್, ಸಹಾಯಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಗಮ, ರಾಯಚೂರು *ರವರ ವಿರುದ್ಧ ಹೊರಿಸಲಾದ ಆರೋಪವನ್ನು ಭಾಗಶ:* ***ರುಜುವಾತುಪಡಿಸಲಾಗಿದೆ*** *ಎಂದು ನಿರ್ಣಯಿಸಲಾಗಿದೆ.*

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

18ನೇ ನವೆಂಬರ್ 2019

(ಸೆಲ್ವ ಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# GOVERNMENT OF KARNATAKA

## KARNATAKA LOKAYUKTA

No:LOK/INQ/14-A/394/2013/ARE-16

Multi Storied Buildings,
Dr.B.R.Ambedkar Veedhi,
Bengaluru-560 001,
Date: **20/11/2019**

## RECOMMENDATION

Sub:- Departmental inquiry against Sri Krishnaraj, the then Assistant Director, Karnataka Rural Infrastructure Development Limited, Raichur – Reg.

Ref:-1) Government Order No. ಗ್ರಾಅಪ 16 ಸುಗ್ರಾಯೋ 2013 Bengaluru dated 24/09/2013.

2) Nomination order No.LOK/INQ/14-A/394/2013 Bengaluru dated 07/10/2013 of Upalokayukta-1, State of Karnataka, Bengaluru.

3) Inquiry Report dated 18/11/2019 of Additional Registrar of Enquiries-16, Karnataka Lokayukta, Bengaluru

----

The Government by its Order dated 24/09/2013 initiated the disciplinary proceedings against Sri Krishnaraj, the then Assistant Director, Karnataka Rural Infrastructure Development Limited, Raichur (hereinafter referred to as Delinquent Government Official for short as DGO) and entrusted the Departmental Inquiry to this Institution.

2. This Institution by Nomination Order No. LOK/INQ/14-A/394/2013 dated 07/10/2013 nominated Additional Registrar of Enquiries-4, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently by Order No. LOK/INQ/14A/2014 dated 14/3/2014, Additional Registrar of Enquiries-11

was re-nominated as Inquiry Officer to conduct Departmental inquiry against DGO. Again by order No.UPLOK-1&2/DE/ Transfers/2019 dated 7/2/2019, the Additional Registrar of Enquiries-16 was re-nominated as Inquiry Officer to conduct Departmental Inquiry against DGO.

3. The DGO Sri Krishnaraj, Assistant Director, Karnataka Rural Infrastructure Development Limited, Raichur was tried for the following charge:-

> "Complaint of Sri Meheboob S/o. Nabeesab Nayikodi r/o. Heggadadinni filed against you – DGO in this institution, was registered at Compt/Uplok/GLB-240/ 2011. It is alleged in the complaint that the Government had sanctioned sum of ₹3,00,000/- for development of Mustoor Water Tank, but you – DGO has not developed the tank and misappropriated that amount. So also, for construction of lavatory and drinking water for Veeragoti Temple, through Tourism Department had sanctioned a sum of ₹14.5 Lakhs, you – DGO has made sub standard works and committed misappropriation of funds.
>
> On the said complaint, objections/comments were called for, but you – DGO failed to submit objections/comments inspite of service of notice and reminder. Of course, by letter dt. 06/03/2012, you DGO had requested time up to 20/3/2012 to file objections/comments and documents, but failed to file objections/comments on or before 20/3/2012 also. So, reminders dt. 02/04/2012 and 13/04/2012 were issued to you – DGO. Still you – DGO failed to submit objections/reply. Then a show cause notice

dt.11/05/2012 was sent to you – DGO to show cause within a week from the date of receipt of that show cause notice as to why disciplinary proceedings should not be initiated against you – DGO for not responding to our letters/reminders. The said show cause notice was serviced on you – DGO on 26/10/2012. Then also, you DGO- failed to submit objections/reply besides any cause by not filing reply to it. Further, Observation Note dt. 20/12/2012 was sent to you – DGO to show cause as to why recommendation should not be made to the Competent Authority for initiating departmental inquiry against you – DGO about your misconduct in the matter. For that you – DGO filed reply, but, the same has not been found convincing to drop the proceedings, thereby failed to maintain absolute integrity and devotion to duty, the act of which is unbecoming of a Government Servant and thereby committed misconduct as enumerated U/R 3(1)(i) to (iii) of Karnataka Civil Services (Conduct) Rules, 1966."

4. The Inquiry Officer (Additional Registrar of Enquiries-16) on appreciation of oral and documentary evidence has held that, the Disciplinary Authority has proved the charge against the DGO Sri Krishnaraj, the then Assistant Director, Karnataka Rural Infrastructure Development Limited, Raichur relating to non-submission of objections/comments by DGO to the complaint allegations and the Disciplinary Authority has failed to prove the charge relating to misappropriation of funds in the execution of works of development of Mustoor Water Tank and construction of toilets and providing drinking water at Veeragoti Temple.

5. On re-consideration of inquiry report, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGO Sri Krishnaraj, he has retired from service on 31/08/2016 (during the pendency of inquiry).

7. Having regard to the nature of charge proved against DGO Sri Krishnaraj, it is hereby recommended to the Government for imposing penalty of withholding 5% of pension payable to DGO Sri Krishnaraj, the then Assistant Director, Karnataka Rural Infrastructure Development Limited, Raichur for a period of 5 years.

8. Action taken in the matter shall be intimated to this Authority.

Connected records are enclosed herewith.

N. Ananda

20/11

**(JUSTICE N. ANANDA)**
Upalokayukta-1,
State of Karnataka,
Bengaluru

## GOVERNMENT OF KARNATAKA

## KARNATAKA LOKAYUKTA

No.LOK/INQ/14-A/394/2013/ARE-16
(Encl: (a) Recommendation of Hon'ble Upalokayukta & Inquiry Report of Inq. Officer, in original
(b) Connected records

Multi Storied Building,
Dr. B.R. Ambedkar Veedhi,
Bengaluru – 560 001
Date: 20/11/2019

**/CONFIDENTIAL/**

**To,**

Dr. Nagambika Devi.N, IAS,
Principal Secretary to Government,
Rural Development & Panchayath Raj Department,
Multi Storied Building,
Bengaluru 560 001.

**Respected Madam,**

Sub:- Departmental inquiry against Sri Krishnaraj, the then Assistant Director, Karnataka Rural Infrastructure Development Limited, Raichur – Reg.

Ref:- 1)Government Order No.ಗ್ರಾಅಪ 16 ಸುಗ್ರಾಯೋ 2013, Bengaluru dated 24/09/2013.

2) Inquiry Report dated 18/11/2019 of Additional Registrar of Enquiries-16, Karnataka Lokayukta, Bengaluru.

3) Recommendation dated 20/11/2019 of Hon'ble Upalokayukta-1, State of Karnataka, Bengaluru

*****

Adverting to the above, I am directed to forward herewith the Recommendations of the Hon'ble Upalokayukta-I, State of Karnataka, Bengaluru, dated 20/11/2019 in original, and the Report of the Inquiry Officer, in original, along with relevant records of inquiry, as detailed below:

29/11/19

INDEX

| Sl. No. | Particulars of Documents | Page Nos. |
|---|---|---|
| | Sealed cover containing the originals of Recommendation dated 20/11/2019 of Hon'ble Upalokayukta-1, and inquiry report dated 18/11/2019 | |
| File 1 | Order Sheet File (Original). | 1-40 |
| File 2 | Documents containing :<br>I. 12(3) report of Hon'ble Upalokayukta-I, dated: 11/02/2013 (xerox).<br>II. Government Order No. ಗ್ರಾಅಪ/16/ಸುಗ್ರಾಯೋ/ 2013 ಬೆಂಗಳೂರು, ದಿನಾಂಕ: 24/09/2013 (xerox).<br>III. Nomination order No: Lok/INQ/14-A/394/ 2013 dated: 07/10/2013 of Hon'ble Upalokayukta-1, Bangalore (xerox). | <br>41-43<br>44-45<br>46-47 |
| | IV. Served copy of Articles of charges dtd.21/10/2013- 5 pages (Original) | 48-52 |
| | V. First Oral Statement of DGO dtd:18/11/2013 (Original) | 53 |
| | VI. Written Statement submitted by DGO dtd.18/11/2013, 2 pages (Original) | 54-55 |
| File 3 | Witness examined on behalf of the Disciplinary Authority | |
| | PW-1: Sri.Mehaboobsab S/o Nabisab, dt.21/8/2014, 3 pages (Original) | 56-58 |
| | PW2: Sri.Somalingappa Ingalagi, Retd District Judge and the then ARE-6, dt.31/3/2015, 5 pages (original) | 59-63 |
| | Documents marked on behalf Disciplinary Authority (Ex.P1 to Ex.P.21) | |
| | Ex.P-1: Complaint of Sri.Mehaboobsab, dt. 8/9/2011(original) | 64 |
| | Ex.P-2: Complaint in form No.1 of Sri.Mehaboobsab, dt.8/9/2011, 2 pages (original) | 65-66 |
| | Ex.P-3: Complaint in form No.II of Sri.Mehaboobsab, dt.8/9/2011 (original) | 67 |
| | Ex.P-4, 5,6, 7, 8 ,9, 10 and 11: Photos (original) | 68-71 |
| | Ex.P-12: Works details, 2 pages(xerox) | 72-73 |
| | Ex.P-13: letter of complainant to ARE-6, (original) | 74 |
| | Ex.P-14: Himbaraha of ARE-6 to Sri.Krishnaraj, (original) | 75 |
| | Ex.P-15: Letter of Asst. Director addressed to ARE-6 dt.6/3/2012(original) | 76 |
| | Ex.P-16:Reminder letter of ARE-6 to Krishnaraj dt.2/4/2012, (xerox) | 77 |
| | Ex.P-17: Reminder letter of ARE-6 to Krishnaraj dt.13/4/2012, (original) | 78 |
| | Ex.P-18: Showcause notice of ARE-6 to Krishnaraj dt.11/5/2012 (xerox) | 79 |
| | Ex.P-19:Letter of PI, KLA, Raichur dt.26/10/2012 addressed to ARE-6(original) | 80 |
| | Ex.P-20: Observation note dt.20/12/2012 of ARE-6 to Krisharaj(original) | 81-83 |
| | Ex.P-21: Letter of PI, KLA, Raichur dt.28/12/2012 | 84 |

| | | |
|---|---|---|
| | addressed to ARE-6 serving of observation note,(original) | |
| File 4 | Witness examined on behalf of the DGO | |
| | DW-1: Sri.D.Krishnaraj dt.1/12/2015, 2 pages (Original) | 85-86 |
| | Documents marked on behalf of the Disciplinary Authority (Ex.D-1 to Ex.D-4) | |
| | Ex.D-1: Letter of Sri.D.Krishnaraj addressed to Deputy Director dt.25/4/2012 (True copy) | 87 |
| | Ex.D-2: Copy of Official Memorandum of Sri.C.K.Shivanna, of Karnataka Rural Infrastructure Development Limited, dt.9/4/2012 (true copy) | 88-90 |
| | Ex.D-3: Copy of Official Memorandum of Disciplinary Authority, Karnataka Rural Infrastructure Development Limited, dt.15/2/2013 (true copy) | 91-93 |
| | Ex.D-4: Copy of death certificate of father-in-law of DGO dt.21/10/2013(attested copy) | 94 |

Receipt of the Recommendation of the Hon'ble Upalokayukta-I, along with the Report of the Inquiry Officer in a sealed cover and the connected inquiry records, as mentioned above, may please be acknowledged, at the earliest.

Yours faithfully,

**(H.M. NANJUNDASWAMY)**
Registrar,
Karnataka Lokayukta,
Bengaluru

Copy to
Addl. Registrar of Enquiries -16, Karnataka Lokayukta, Bengaluru along with copy of recommendation, for information and further necessary action.